# ಎಐ ಹರಿಸಿದ ಸಂಗೀತ ಸುಧೆ

ಜನರೇಟಿವ್ ಎಐ ತಂತ್ರಜ್ಞಾನದಿಂದ ಸಂಗೀತ ರಚಿಸುವುದು ಹಳೆಯ ಪ್ರಕಾರ. ಈ ಮಾದರಿಯಿಂದ ವಚನಗಳಿಗೂ ಸಂಗೀತ ಸ್ಪರ್ಶ ಒದಗಿಸುವುದು ಈ ಹೊತ್ತಿನ ಹೊಸ ವಿಚಾರ. ಇಂತಹದ್ದೊಂದು ಕಾಯಕವನ್ನು ಕಳೆದ ಒಂದೂವರೆ ವರ್ಷದಿಂದ ಮಾಡಿಕೊಂಡು ಬಂದಿದೆ 'ಸಂಗೀತ ಸುಧಾ' ತಂಡ.

■ ಶಶಿಕುಮಾರ್ ಸಿ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಬಸವಣ್ಣನವರ ಈ ವಚನವನ್ನು ಸಂಗೀತದ ಮೂಲಕ ಕಟ್ಟಿಕೊಟ್ಟ ಹಲವು ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಆ ಎಲ್ಲ ಸಂಗೀತ ಸಂಯೋಜನೆಗಳು ಮನುಷ್ಯರ ಸೃಷ್ಟಿ. ಆದರೆ ಇದೇ ವಚನಕ್ಕೆ ಜನರೇಟಿವ್ ಎಐ (ಕೃತಕ ಬುದ್ಧಿಮತ್ತೆ) ಮೂಲಕ ಸಂಗೀತ ಸೃಷ್ಟಿಸಿದರೆ ಹೇಗೆ? ಕೇಳಲು ಹೇಗಿರುತ್ತೆ? ಅದು ಥೇಟ್ ಮನುಷ್ಯರೇ ಸೃಷ್ಟಿಸಿದ ಸಂಗೀತವನ್ನು ಮೀರಿಸುವಂತಿದ್ದರೆ ಅದನ್ನು ನೀವು ನಂಬುತ್ತೀರಾ?

ನಂಬಲೇಬೇಕು. ಅಂಥದ್ದೊಂದು ಸಾಧ್ಯತೆಗೆ ಕೈಹಾಕಿ ಯಶಸ್ಸು ಕಂಡವರು ಗಣೇಶ್ ಕೆ. ದಾವಣಗೆರೆ, ಸೋಮಶೇಖರ್ ಎಸ್. ಹುಲ್ಮನಿ ಹಾಗೂ ತೇಜಸ್ ಜೈನ್. ಇವರ ಈ ಸಾಹಸಕ್ಕೆ ವಿದ್ಯಾರ್ಥಿಗಳ ದೊಡ್ಡ ತಂಡವೇ ಕೈಜೋಡಿಸಿದೆ. ಇವರೆಲ್ಲರ ಈ ಕಾರ್ಯಕ್ಕೆ ವೇದಿಕೆಯಾಗಿರುವುದು 'ಸಂಗೀತ ಸುಧಾ' ಎನ್ನುವ ಯೂಟ್ಯೂಬ್ ಚಾನಲ್. ಈ ತಂಡ ಸೃಷ್ಟಿಸಿದ ಎಐ ಸಂಗೀತ ಸಂಯೋಜನೆಯ ವಿಡಿಯೊಗಳನ್ನು ನೂರಾರು ಆಸಕ್ತರು ಆಸ್ವಾದಿಸುತ್ತಿದ್ದಾರೆ. ಈ ಮೂಲಕ ವಚನ ಸಾಹಿತ್ಯ ಸೇರಿದಂತೆ ಕನ್ನಡ ಸಾಹಿತ್ಯ ಅಭಿರುಚಿಯನ್ನು ಜನರಲ್ಲಿ ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ.

'ಸಂಗೀತ ಸುಧಾ' ವಚನ ಸಾಹಿತ್ಯಕ್ಕಷ್ಟೇ ಸೀಮಿತವಾಗಿಲ್ಲ. ದಾಸ ಸಾಹಿತ್ಯ, ಜನಪದ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯದ ಪ್ರಮುಖ ಪದ್ಯಗಳು, ಕವನಗಳಿಗೆ ತಾವು ಸೃಜಿಸಿದ ಎಐ ಸಂಗೀತವನ್ನು ಸಂಯೋಜನೆ ಮಾಡಿ, ಅವುಗಳನ್ನು ದೃಶ್ಯರೂಪಕ್ಕಿಳಿಸಿ ಜನರಿಗೆ ಮುಟ್ಟಿಸುವ ಕಾರ್ಯ ಮಾಡುತ್ತಿದೆ. ಪಂಪ ಭಾರತ, ಕುಮಾರವ್ಯಾಸ ಭಾರತದ ಪದ್ಯಗಳಿಗೂ ಈ ಸಂಗೀತ ವ್ಯಾಪಿಸಿದೆ. ಹಳೆಗನ್ನಡದ ಪದ್ಯಗಳನ್ನು ಅವುಗಳದ್ದೇ ಧಾಟಿಯಲ್ಲಿ ಧ್ವನಿಸುವಂತೆ ಸಂಗೀತ ಹಾಗೂ ಗಾಯನವನ್ನು ಎಐ ಮೂಲಕ ಸೃಷ್ಟಿಸಿದ್ದಾರೆ. ಕುತೂಹಲಕ್ಕೆ ಶುರುಮಾಡಿದ ಎಐ ಸಂಗೀತ ಸಂಯೋಜನೆಯು ಇಂದು ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಇದುವರೆಗೆ ಸಾವಿರಾರು ವಿಡಿಯೊಗಳನ್ನು ಸೃಷ್ಟಿಸಿದ್ದು, ವೀಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕನ್ನಡ ಸಾಹಿತ್ಯದ ಆಸಕ್ತರಿಗಂತೂ ತಂತ್ರಜ್ಞಾನದ ಈ ಹೊಸ ಸಾಧ್ಯತೆಯು ಖುಷಿಕೊಟ್ಟಿದೆ.

## ತಂಡದ ಬಗ್ಗೆ ಒಂದಿಷ್ಟು...



ಗಣೇಶ್ ಕೆ. ದಾವಣಗೆರೆ



ಸೋಮಶೇಖರ್ ಎಸ್. ಹುಲ್ಮನಿ



ತೇಜಸ್ ಜೈನ್

'ಸಂಗೀತ ಸುಧಾ' ತಂಡದ ಮುಂದಾಳತ್ವ ಗಣೇಶ್ ಕೆ. ದಾವಣಗೆರೆ ಅವರದ್ದು. ಇವರು ಮೂಲತಃ ದಾವಣಗೆರೆಯವರು. ಸದ್ಯ ಯನೆಪೊಯೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಈ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತವರು ಟಾಪರ್ ಐಎಎಸ್‌ನ ಸಂಸ್ಥಾಪಕ ಸೋಮಶೇಖರ್ ಎಸ್. ಹುಲ್ಮನಿ. ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿದ್ಯಾಭ್ಯಾಸದ ಹಿನ್ನೆಲೆ ಹೊಂದಿರುವ ಸೋಮಶೇಖರ್ ಕನ್ನಡ ಸಾಹಿತ್ಯದ ಬಗ್ಗೆ ವಿಶೇಷ ಪ್ರೀತಿ ಹಾಗೂ ಆಸಕ್ತಿ ಹೊಂದಿದವರು. ಜೊತೆಗೆ ತಾವೇ ಹುಟ್ಟುಹಾಕಿದ ಟಾಪರ್ ಐಎಎಸ್ ಅಕಾಡೆಮಿಯಲ್ಲಿ ಕನ್ನಡ ವಿಷಯವನ್ನು ಪರೀಕ್ಷಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದಾರೆ. ಟಾಪರ್ ಐಎಎಸ್ ಸಹ ಸಂಸ್ಥಾಪಕ ಹಾಗೂ ಅಮೆರಿಕದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ತೇಜಸ್ ಜೈನ್ ಸಹ ಈ ತಂಡದ ಭಾಗವಾಗಿದ್ದಾರೆ. ಇವರೆಲ್ಲರ ಜೊತೆಗೆ ಅಳಿಲು ಸೇವೆಗೆ ಸ್ವಯಂಸೇವಕರಂತೆ ನಿಂತಿದ್ದಾರೆ ಹಲವು ಕಾಲೇಜುಗಳ ವಿದ್ಯಾರ್ಥಿಗಳು.